# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್. ರಸ್ತೆ, ತುಮಕೂರು-572 103

## ಆದೇಶ

ವಿಷಯ : ಸ್ನಾತಕ ಪದವಿಗಳಾದ ಬಿ.ಕಾಂ/ಬಿ.ಬಿ.ಎಂ ನ 3 ಹಾಗೂ 4ನೇ ಸೆಮಿಸ್ಟರ್‌ಗಳಿಗೆ Business Communication ವಿಷಯವನ್ನು ಅಳವಡಿಸಿ ಪಠ್ಯಕ್ರಮವನ್ನು ಪರಿಷ್ಕರಿಸುವ ಕುರಿತು.

ಉಲ್ಲೇಖ: 1) ಈ ಕಚೇರಿ ಅಧಿಸೂಚನೆ ಸಂಖ್ಯೆ: TU:AC:2016-17:395 ದಿನಾಂಕ 15.05.2017

2) ಡೀನರು, ವಾಣಿಜ್ಯ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರ ಪತ್ರ ದಿನಾಂಕ 24.06.2017

3) ಅಧ್ಯಕ್ಷರು, ಸ್ನಾತಕ ವಾಣಿಜ್ಯಶಾಸ್ತ್ರ ಅಧ್ಯಯನ ಮಂಡಳಿ ಇವರ ಪತ್ರ ದಿನಾಂಕ 07.07.2017

4) ಅಧ್ಯಕ್ಷರು, ಸ್ನಾತಕ ವ್ಯವಹಾರ ಆಡಳಿತ (ಬಿ.ಬಿ.ಎಂ) ಅಧ್ಯಯನ ಮಂಡಳಿ ಇವರ ಪತ್ರ ದಿನಾಂಕ 17.07.2017

5) ಡೀನರು, ವಾಣಿಜ್ಯ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರ ಪತ್ರ ದಿನಾಂಕ 21.07.2017

6) ದಿನಾಂಕ 19.07.2017ರಂದು ನಡೆದ ವಿದ್ಯಾವಿಷಯಕ ಸಭೆಯ ನಿರ್ಣಯ

7) ದಿನಾಂಕ 01.08.2017ರಂದು ಡೀನರು, ವಾಣಿಜ್ಯ ನಿಕಾಯ ಇವರ ಅಧ್ಯಕ್ಷತೆಯಲ್ಲಿ ನಡೆದ ಸ್ನಾತಕ ವಾಣಿಜ್ಯ, ವ್ಯವಹಾರ ಆಡಳಿತ ಹಾಗೂ ಇಂಗ್ಲಿಷ್ ಅಧ್ಯಯನ ಮಂಡಳಿ ಸಭೆಯ ನಡಾವಳಿಗಳು

8) ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ 17.08.2017 ಮತ್ತು ದಿನಾಂಕ 23.08.2017

* * * *

ಪ್ರಸ್ತಾವನೆ:

ಉಲ್ಲೇಖ (1) ರಂತೆ ವಿಶ್ವವಿದ್ಯಾನಿಲಯವು 2016-17ನೇ ಸಾಲಿನಿಂದ ಸ್ನಾತಕ ಪದವಿಗಳಿಗೆ ಸಿ.ಬಿ.ಸಿ.ಎಸ್. ವಿನಿಯಮದ ಪ್ರಕಾರ ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ. ಉಲ್ಲೇಖ (2)ರಂತೆ ಡೀನರು, ವಾಣಿಜ್ಯ ನಿಕಾಯ ಇವರು ಉಲ್ಲೇಖ (3)ರ ಪತ್ರವನ್ನು ಅಡಕಗೊಳಿಸಿ, ಸದರಿ ಮನವಿಯಲ್ಲಿ ಅಧ್ಯಾಪಕ ಸಂಘದ ಅಧ್ಯಕ್ಷರು Business Communication ವಿಷಯವನ್ನು 3 ಮತ್ತು 4ನೇ ಸೆಮಿಸ್ಟರ್‌ನ ಬಿ.ಕಾಂ ಮತ್ತು ಬಿ.ಬಿ.ಎಂ ಪದವಿಗಳಿಗೆ 50 ಅಂಕಗಳಿಗೆ ನಿಗದಿಗೊಳಿಸಿ ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ. ಆದುದರಿಂದ, Business Communication ವಿಷಯವನ್ನು ಅಳವಡಿಸಿಕೊಳ್ಳುವ ಬಗ್ಗೆ ಬಿ.ಕಾಂ ಮತ್ತು ಬಿ.ಬಿ.ಎಂ ಗಳ ಅಧ್ಯಯನ ಮಂಡಳಿಯ ಸಭೆಯನ್ನು ಕರೆದು ಚರ್ಚಿಸಿ, ಅಗತ್ಯ ಕ್ರಮ ಕೈಗೊಳ್ಳಬಹುದಾಗಿದೆ ಎಂದು ತಿಳಿಸಿರುತ್ತಾರೆ.

ಉಲ್ಲೇಖ (3) ರಂತೆ ಬಿ.ಕಾಂ ಅಧ್ಯಯನ ಮಂಡಳಿ ಸಭೆ ಸೇರಿ ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ.

**"It is resolved to continue the B.Com (CBCS) programme structure and syllabus, which is designed by the BOS for CBCS pattern, which is available on the Tumkur University website and Members also felt that it would difficult task to provide additional two hours in the exiting time table for Business Communication".**

ಉಲ್ಲೇಖ (4)ರಂತೆ ಸ್ನಾತಕ ಬಿ.ಬಿ.ಎಂ ಅಧ್ಯಯನ ಮಂಡಳಿಯು ಸಭೆ ಸೇರಿ ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ

**"The Board had a detailed discussion on the component of having Business Communication and it is resolved to include Business Communication-I (in III Sem BBM) and Business Communication-II (in IV Sem BBM) for 50 marks each as Core subjects to be taught by the BBM faculty only".**

(ಮ.ತಿ.ನೋ)

c:\users\dayananda\desktop\kannada letters 2015.doc

Scanned by CamScanner

ಉಲ್ಲೇಖ (5)ರಂತೆ ಡೀನರು, ವಾಣಿಜ್ಯ ನಿಕಾಯ ಇವರು ಈ ಕೆಳಕಂಡಂತೆ ಅಭಿಪ್ರಾಯವನ್ನು ನೀಡಿರುತ್ತಾರೆ.

**"In these circumstances, it can be recommended to the University to adopt Business Communication as a separate subject for III & IV semester B.Com and BBM for 50 marks from the academic year 2017-18".**

ಉಲ್ಲೇಖ (6)ರಂತೆ ದಿನಾಂಕ 18.07.2017ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯು ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ವಾಣಿಜ್ಯ, ಇಂಗ್ಲಿಷ್ ಹಾಗೂ ವ್ಯವಹಾರ ಆಡಳಿತ (ಬಿ.ಬಿ.ಎಂ) ಅಧ್ಯಯನ ಮಂಡಳಿಗಳು, ಡೀನರು ಹಾಗೂ UG CBCS ಸಮಿತಿಯವರು ಸಭೆ ಸೇರಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುವಂತೆ ನಿರ್ಣಯಿಸಿರುತ್ತದೆ.

ಉಲ್ಲೇಖ (7)ರಂತೆ ಡೀನರು, ವಾಣಿಜ್ಯ ನಿಕಾಯ ಇವರ ಅಧ್ಯಕ್ಷತೆಯಲ್ಲಿ ನಡೆದ ಸ್ನಾತಕ ಇಂಗ್ಲಿಷ್, ಬಿ.ಕಾಂ ಮತ್ತು ಬಿ.ಬಿ.ಎಂ ಅಧ್ಯಯನ ಮಂಡಳಿಗಳ ಸಭೆಯಲ್ಲಿ ಸದರಿ ವಿಷಯದ ಬಗ್ಗೆ ವಿಶ್ವವಿದ್ಯಾನಿಲಯದ ಪ್ರಾಧಿಕಾರಿಗಳು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನಿಸಲಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಈಗಾಗಲೇ ಶೈಕ್ಷಣಿಕ ವರ್ಷ 2017-18ರ ಮೊದಲನೇ ಸೆಮಿಸ್ಟರ್‌ನ ಶೈಕ್ಷಣಿಕ ಅವಧಿ ಅರ್ಧಕ್ಕಿಂತ ಹೆಚ್ಚು ಮುಗಿದಿರುವುದರಿಂದ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ:ತುವಿ:ಶೈವಿ:2017-18:/2025/ತುಮಕೂರು, ದಿನಾಂಕ:23.08.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಬಿ.ಕಾಂ ಮತ್ತು ಬಿ.ಬಿ.ಎಂ 3 ಮತ್ತು 4ನೇ ಸೆಮಿಸ್ಟರ್‌ಗೆ Business Communication ವಿಷಯವನ್ನು ಹೆಚ್ಚುವರಿಯಾಗಿ ತಲಾ 50 ಅಂಕಗಳ ಮಾದರಿಯಲ್ಲಿ ಪಠ್ಯಕ್ರಮವನ್ನು ಪ್ರಸಕ್ತ ಸೆಮಿಸ್ಟರ್‌ಗಳಿಂದಲೇ ಅಳವಡಿಸಿಕೊಂಡು, ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನಾನುಕೂಲವಾಗದಂತೆ ಪಠ್ಯ ವಿಷಯವನ್ನು ವಾಣಿಜ್ಯ ಹಾಗೂ ವ್ಯವಹಾರ ಆಡಳಿತ (ಬಿ.ಬಿ.ಎಂ) ಬೋಧಕರು ಬೋಧಿಸಲು ಆದೇಶಿಸಿದೆ.

**ಆದೇಶದ ಮೇರೆಗೆ,**

**ಕುಲಸಚಿವರು**

ಗೆ,

**ಘಟಕ ಹಾಗೂ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**

ಪ್ರತಿ:

1) ಡೀನರು, ಕಲಾ ಹಾಗೂ ವಾಣಿಜ್ಯ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2) ಕುಲಸಚಿವರು (ಪರೀಕ್ಷಾಂಗ) ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು,
3) ಅಧ್ಯಕ್ಷರು, ಸ್ನಾತಕ ವಾಣಿಜ್ಯಶಾಸ್ತ್ರ/ವ್ಯವಹಾರ ಆಡಳಿತ (ಬಿ.ಬಿ.ಎಂ) ಹಾಗೂ ಇಂಗ್ಲಿಷ್ ಅಧ್ಯಯನ ಮಂಡಳಿ. ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4) ಅಧ್ಯಕ್ಷರು, ಸ್ನಾತಕ ವಾಣಿಜ್ಯಶಾಸ್ತ್ರ/ವ್ಯವಹಾರ ಆಡಳಿತ (ಬಿ.ಬಿ.ಎಂ) ಹಾಗೂ ಇಂಗ್ಲಿಷ್ ಪರೀಕ್ಷಾ ಮಂಡಳಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5) ಅಧ್ಯಕ್ಷರು, ಸ್ನಾತಕ CBCS Redressal ಸಮಿತಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6) ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಯವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7) ಕಛೇರಿ ಪ್ರತಿ.



Scanned by CamScanner